ಅಸಲು ದಾವಾ ಸಂಖ್ಯೆ . 276- 2014

ಪಿ.ಡಬ್ಲ್ಯೂ-2
ದಿಃ 07-03-2020
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ-

ನಾನು ಹಿರೇಗೋಣಿಗೇರ ಗ್ರಾಮದಲ್ಲಿ ಸುಮಾರು 32 ವರ್ಷಗಳಿಂದ ವಾಸವಿದ್ದೇನೆ . ವಾದಿಯವರು ತಮ್ಮ ಜಾಗದಲ್ಲಿ ಮಾಡಿರುವ ವ್ಯವಹಾರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ . ನಾನು ಪತ್ರದಲ್ಲಿ ನೋಡಿರುತ್ತೇನೆ ಎಂದರು . ಪ್ರಮಾಣ ಪತ್ರವನ್ನು ತಯಾರಿಸಲು ನಾನು ಮಾಹಿತಿ ಕೊಟ್ಟಿರುತ್ತೇನೆ. 1977 ಇಸವಿಯಲ್ಲಿ ಕಾಳಮ್ಮ ಬಿನ್ ವೀರಬಸಪ್ಪರವರು ಬಣಕಾರ್ ರಂಗಪ್ಪ ಬಿನ್ ಮಹಾದೇವಪ್ಪ ರವರಿಗೆ ಮಾಡಿಕೊಟ್ಟ ಕ್ರಯಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಕ್ರಯ ಪತ್ರದಂತೆ ಪೂರ್ವ ಪಶ್ಚಿಮ 27 ಗಜ ಉತ್ತರ ದಕ್ಷಿಣ 20 ಗಜ ಮಾರಾಟ ಮಾಡಲಾಗಿತು . 1992 ರಲ್ಲಿ ಬಣಕಾರ್ ರಂಗಪ್ಪಬಿನ್ ಮಹಾದೇವಪ್ಪ ರವರು ಪುನಃ ತಾನು ಖರೀದಿ ಮಾಡಿದ ಮೇಲೆ ಹೇಳಿದ ಜಾಗವನ್ನು ಕಾಳಮ್ಮ ಬಿನ್ ವೀರಬಸಪ್ಪ ರವರಿಗೆ ಸಂಪೂರ್ಣವಾಗಿ ಮಾರಾಟ ಮಾಡಿದರು . ದಿಃ 12-09-2011 ರಂದು ಕಾಳಮ್ಮ ರವರು ಪ್ರಕಾಶ್ ಬಿನ್ ಮಹಾದೇವಪ್ಪ ರವರಿಗೆ 35 78 ಅಡಿ ಜಾಗವನ್ನು ಮಾರಿರುತ್ತಾರೆ . ಹಾಲಿ ಪ್ರಕಾಶ್ ರವರು ಸ್ವಾಧೀನಾ ಇರುವ ಜಾಗದ ಚೆಕ್ಕು ಬಂಧಿ ಪೂರ್ವಕ್ಕೆ ಪಾರಿ ಬೇಲಿ , ಪಶ್ಚಿಮಕ್ಕೆ ಪಿ ಡಬ್ಲೂ ಡಿ ರಸ್ತೆ , ಉತ್ತರಕ್ಕೆ ಪ್ರತಿವಾದಿ 1 ಗೋವಿಂದಪ್ಪ ರವರ ಜಾಗ , ದಕ್ಷಿಣಕ್ಕೆ ವಾದಿಯ ಜಾಗ . ಸದರಿ ದಕ್ಷಿಣ ದಿಕ್ಕಿನ ವಾದಿಯ ಜಾಗದ ನಂತರ ದಕ್ಷಿಣ ದಿಕ್ಕಿಗೆ 3 ನೇ ಪ್ರತಿವಾದಿಯ ಜಾಗ ಬರುತ್ತದೆ ಎಂದರೆ ಸರಿ .ಸದರಿ 3 ನೇ ಪ್ರತಿವಾದಿಯ ಜಾಗದ ಹಿಂದೆ ಎಂದರೆ 3 ನೇ ಪ್ರತಿವಾದಿಯ ಜಾಗದ ಪೂರ್ವ ದಿಕ್ಕಿಗೆ 2 ನೇ ಪ್ರತಿವಾದಿ ಪಾಯ ಹಾಕಿರುವ ಜಾಗ ಬರುತ್ತದೆ ಎಂದರೆ ಸರಿ .

3 ನೇ ಪ್ರತಿವಾದಿಯು ತನ್ನ ಆಸ್ತಿಯಲ್ಲಿ ವೆಲ್ಡಿಂಗ್ ಶಾಪ್ ಮತ್ತು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ . ಅಲ್ಲಿ ವರ್ಕ್ ಶಾಪ್ ಅಷ್ಟೇ ಇರುತ್ತದೆ ಎಂದರು . ನಿಡಿ 2 ರಲ್ಲಿ ಸದರಿ ವರ್ಕ್ ಶಾಪ್ ಕಾಣಿಸುತ್ತದೆ ಎಂದರೆ ಸರಿ . 3 ನೇ ಪ್ರತಿವಾದಿಯ ಜಾಗದ ವಿಸ್ತೀರ್ಣ ನನಗೆ ಗೊತ್ತಿಲ್ಲ . ಸದರಿಯವರ ಜಾಗದ ವಿಸ್ತೀರ್ಣವು 20X 30 ಎಂದರೆ ನನಗೆ ಗೊತ್ತಿಲ್ಲ .2 ನೇ ಪ್ರತಿವಾದಿಯವರ ಮನೆ ಸಂಖ್ಯೆ ನನಗೆ ಗೊತ್ತಿಲ್ಲ . 3 ನೇ ಪ್ರತಿವಾದಿಯ ಆಸ್ತಿ ನಂ 205 ವಾರ್ಡ್ ನಂ 254 ಎಂದರೆ ನನಗೆ ಗೊತ್ತಿಲ್ಲ . 3 ನೇ ಪ್ರತಿವಾದಿ ಮೇಲೆ ಹೇಳಿದ ಆಸ್ತಿ ನಂ 205 ರಲ್ಲಿ ಅವರ ಅಜ್ಜನ ಕಾಲದಿಂದ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಹಾಲಿ ಅವರು ವಾಸವಿದ್ದಾರೆ ಎಂದರು . 3 ನೇ ಪ್ರತಿವಾದಿ ಅವರ ಅಜ್ಜನ ಕಾಲದಿಂದ ಆಸ್ತಿ ಸಂ 205 ರಲ್ಲಿ ವಾಸವಿರುವ ವಿಚಾರ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ . 2 ನೇ ಪ್ರತಿವಾದಿ ಆಸ್ತಿ ಸಂ 254 /205 ರಲ್ಲಿ ಒಟ್ಟು ವಿಸ್ತೀರ್ಣ 70 X48 ಅಡಿಯಲ್ಲಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ . ನನಗೆ ಮೂಲತಃ ಯಾವುದೇ ವಿಚಾರಗಳು ಖುದ್ದು ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡುವ

ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ವಾದಿಯವರು ಆರೋಗ್ಯವಂತರಾಗಿದ್ದಾರೆ ಎಂದರೆ ಸರಿ . ಸದರಿಯವರು ಓಡಾಡಲು ಶಕ್ತರಾಗಿದ್ದಾರೆಂದರೆ ಸರಿ . ವಾದಿಗೆ ದಾವಾ ಆಸ್ತಿಗಳು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ ಎಂದು ಸೂಚಿಸಿದರೆ ಸರಿ . ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ . 2 ಮತ್ತು 3 ನೇ ಪ್ರತಿವಾದಿಯರು ತಮ್ಮ ತಮ್ಮ ಜಾಗದಲ್ಲಿ ಸ್ವಾಧೀನಾನುಭವದಲ್ಲಿ ಇದ್ದು ಅವರು ವಾದಿಯ ಆಸ್ತಿಯಲ್ಲಿ ಯಾವುದೇ ರೀತಿಯ ಒತ್ತುವರಿ ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . 3 ನೇ ಪ್ರತಿವಾದಿಯ ಜಾಗದ ಕಡೆಗೆ ವಾದಿಯರು ಮಹಡಿ ಮೆಟ್ಟಿಲನ್ನು ಕಟ್ಟಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿಯು 3 ನೇ ಪ್ರತಿವಾದಿಯ ಜಾಗದ ಕಡೆಗೆ ಇದೆ ಆದರೆ ವಾದಿಯು ತಮ್ಮ ಜಾಗದಲ್ಲಿ ಮಹಡಿ ಮೆಟ್ಟಿಲು ಕಟ್ಟಿರುತ್ತಾರೆ ಎಂದರು . ವಾದಿಯು ಸದರಿ ಮಹಡಿ ಮೆಟ್ಟಿಲನ್ನು 3 ನೇ ಪ್ರತಿವಾದಿಯ ಜಾಗದಲ್ಲಿ ½ ಒತ್ತುವರಿ ಮಾಡಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ . ವಾದಿಗೂ ಮತ್ತು 3 ನೇ ಪ್ರತಿವಾದಿಗೂ ಸದರಿ ವಿಚಾರದಲ್ಲಿ ಗಲಾಟೆಯಾಗಿದ್ದು ಗ್ರಾಮ ಪಂಚಾಯಿತಿ ಯರವರು ಅಳತೆ ಮಾಡಲು ಬಂದಿದರು ಎಂದರೆ ನನಗೆ ಗೊತ್ತಿಲ್ಲ . ಸದರಿ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ .

2 ನೇ ಪ್ರತಿವಾದಿಯ ಪರ ವಕೀಲರ ಪಾಟೀ ಸವಾಲನ್ನು 3 ನೇ ಪ್ರತಿವಾದಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.